**Spl. C. 5243/2024**

ಚಾ.ಸಾ **:86** ಪ್ರಾ.ಸಾ **:15**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ರಾಯಚೂರು ಪೀಠ ಸಿಂಧನೂರು

| | | |
|---|---|---|
| ಸಾಕ್ಷಿಯ ಹೆಸರು | : | ವೆಂಕನಗೌಡ |
| ತಂದೆ ಹೆಸರು | : | ನಿಂಗನಗೌಡ ಪಾಟೀಲ್ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಡಿ.ವೈ.ಎಸ್. ಪಿ. |
| ವಿಳಾಸ | : | ಧಾರವಾಡ |

ಸಾಕ್ಷಿಗೆ ದಿನಾಂಕ **24-04-2025** ರಂದು ಪ್ರಮಾಣ ವಚನ ಭೋದಿಸಲಾಯಿತು**.**

<u>ಮುಖ್ಯವಿಚಾರಣೆ **:** ವಿಶೇಷ ಸರ್ಕಾರಿ ಅಭಿಯೋಜಕರಿಂದ **:**</u>

ಜೂನ್ 2015 ರಿಂದ ಜುಲೈ 2017 ರವರೆಗೆ ನಾನು ಕರ್ನಾಟಕ ಲೋಕ್ಕಯುಕ್ತ ಕೊಪ್ಪಳ ಕಛೇರಿಯಲ್ಲಿ ಡಿ.ವೈ.ಎಸ್.ಪಿ. ಆಗಿ ಕಾರ್ಯ ನಿರ್ವಹಿಸಿದ್ದೇನೆ.

2. ದಿನಾಂಕ 27-12-2015 ರಂದು ಕ. ಲೋ. ರಾಯಚೂರಿನ ಪೊಲೀಸ್ ವರಿಷ್ಠಾಧಿಕಾರಿಗಳು ನನಗೆ ರಾಯಚೂರಿನ ಕಛೇರಿಯಲ್ಲಿ ಠಾಣಾಧಿಕಾರಿಯಾಗಿ ಕಾರ್ಯ ನಿರ್ವಹಿಸುವಂತೆ ಜ್ಞಾಪನಾ ಪತ್ರ ನೀಡಿದ್ದರು. ಸಾಕ್ಷಿ ಗುರುತಿಸಿದ ಜ್ಞಾಪನಾ ಪತ್ರವನ್ನು ನಿ.ಪಿ.94 ಎಂದು ಗುರುತಿಸಲಾಯಿತು.

3. ಆ ದಿನಾಂಕದಂದು ನನಗೆ ಪೊಲೀಸ್ ವರಿಷ್ಠಾಧಿಕಾರಿಗಳು ಚಾ.ಸಾ90 ಇವರು ತಯಾರಿಸಿದ ಸೋರ್ಸ್ ವರದಿಯನ್ನು ನೀಡಿದ್ದರು ಮತ್ತು ಆರೋಪಿಯ ವಿರುದ್ಧ ಪ್ರಕರಣ ದಾಖಲಿಸುವಂತೆ ಆದೇಶ ಮಾಡಿದ್ದರು. ಸಾಕ್ಷಿ ಗುರುತಿಸಿದ ಸೋರ್ಸ್ ವರದಿಯನ್ನು ನಿ.ಪಿ.95 ಎಂದು ಗುರುತಸಿಲಾಯಿತು. ಸಾಕ್ಷಿ ಪೊಲೀಸ್ ವರಿಷ್ಠಾಧಿಕಾರಿಗಳು ನೀಡಿದ ಆದೇಶವನ್ನು ಗುರುತಿಸಿದ್ದು , ಆ ಆದೇಶವನ್ನು ನಿ.ಪಿ.96 ಎಂದು ಗುರುತಿಸಲಾಯಿತು.

4. ದಿನಾಂಕ 28-12-2015 ರಂದು ಬೆಳಿಗ್ಗೆ 06-45 ಗಂಟೆಗೆ ಗುನ್ನಾ ನಂಬರ್ 4/2015 ಅನ್ನು ಆರೋಪಿಯ ವಿರುದ್ಧ ಭ್ರಷ್ಟಚಾರ ನಿರ್ಮೂಲನೆ ಕಾನೂನಿನ ಕಲಂ 13(1)(ಇ) ಸಹ ಕಲಂ 13(2) ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿದ್ದೇನೆ. ಸಾಕ್ಷಿ ಗುರುತಿಸಿದ ಪ್ರ.ವ.ವ.ಯನ್ನು ನಿ.ಪಿ.97 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.97(ಎ) ಎಂದು ಗುರುತಿಸಲಾಯಿತು. ನಾನು ಪ್ರ.ವ.ವ.ಯನ್ನು ನ್ಯಾಯಾಲಯಕ್ಕೆ ರವಾನಿಸಿರುತ್ತೇನೆ.

5. ದಿನಾಂಕ 28-12-2015 ರಂದು ನಾನು ರಾಯಚೂರಿನ ವಿಶೇಷ ನ್ಯಾಯಾಲಯಕ್ಕೆ ಮನವಿ ಪತ್ರ ಸಲ್ಲಿಸಿದ ಆರೋಪಿಗೆ ಸಂಬಂಧಿಸಿದ 8 ಸ್ಥಳಗಳಲ್ಲಿ ಶೋಧನೆ ನಡೆಸಲು ಶೋಧನಾ ವಾರೆಂಟ್ ನೀಡುವಂತೆ ಅರ್ಜಿ ಸಲ್ಲಿಸಿದ್ದೇನು.

6. ಅದೇ ದಿನ ನ್ಯಾಯಾಲಯ ಶೋಧನಾ ವಾರೆಂಟುಗಳನ್ನು ನೀಡಿದೆ. ಅವುಗಳಲ್ಲಿ ನಾಲ್ಕು ಅಧಿಕಾರಿಗಳ ಹೆಸರುಗಳನ್ನು ಕಾಣಿಸಿ ಅವರಿಗೆ ಶೋಧನೆ ನಡೆಸುವಂತೆ ಅನುಮತಿ ನೀಡಲಾಗಿತ್ತು. ಸಾಕ್ಷಿ ಆ ವಾರೆಂಟುಗಳು ನಿ.ಪಿ.1, 90, 91, 92 ರಲ್ಲಿವೆ ಎಂದು ಗುರುತಿಸಿದ್ದಾರೆ.

7. ನಾನು ವಿವಿಧ ಇಲಾಖೆಗಳಿಗೆ ಪಂಚರನ್ನು ಕಳುಹಿಸಿಕೊಡುವಂತೆ ಒಟ್ಟು 8 ಪತ್ರಗಳನ್ನು ಬರೆದಿದ್ದೇನೆ. ಆ ಪತ್ರಗಳ ಪ್ರಕಾರ ಆಯಾ ಇಲಾಖೆಯವರು ನನಗೆ 8 ಜನ ಸಿಬ್ಬಂದಿಯನ್ನುಪಂಚರನ್ನಾಗಿ ಕೆಲಸ ಮಾಡಲು ಕಳುಹಿಸಿಕೊಟ್ಟಿದ್ದರು. ಪಂಚರು ನನ್ನಕಛೇರಿಗೆ ದಿನಾಂಕ ಕ 28-12-2015 ರಂದು ಬಂದಿದ್ದರು.

8. ನಾನು ಚಾ.ಸಾ3 ಮತ್ತು 4 ಇವರಿಗೆ ನಾನು ಚಾ.ಸಾ88 ಇವರೊಂದಿಗೆ ಪಂಚರನ್ನಾಗಿ ಸಹಕರಿಸಲು ತಿಳಿಸಿ ಅವರೊಂದಿಗೆ ಕಳಿಸಿದ್ದೇನೆ. ನಾನು ಚಾ.ಸಾ5 ಮತ್ತು 6 ಇವರಿಗೆ ನಾನು ಚಾ.ಸಾ87 ಇವರೊಂದಿಗೆ ಪಂಚರನ್ನಾಗಿ ಸಹಕರಿಸಲು ತಿಳಿಸಿ ಅವರೊಂದಿಗೆ ಕಳಿಸಿದ್ದೇನೆ. ನಾನು ಚಾ.ಸಾ7 ಮತ್ತು 8 ಇವರಿಗೆ ನಾನು ಚಾ.ಸಾ89 ಇವರೊಂದಿಗೆ ಪಂಚರನ್ನಾಗಿ ಸಹಕರಿಸಲು ತಿಳಿಸಿ ಅವರೊಂದಿಗೆ ಕಳಿಸಿದ್ದೇನೆ. ಚಾ.ಸಾ87, 88 ಮತ್ತು 89 ಇವರಿಗೆ ನ್ಯಾಯಾಲಯ ನೀಡಿದ ವಾರೆಂಟುಗಳನ್ನು ಜಾರಿ ಮಾಡುವಂತೆ ತಿಳಿಸಿರುತ್ತೇನೆ.

9. ದಿನಾಂಕ 28-12-2015 ರಂದು ನಾನು, ಪಂಚರಾದ ಚಾ.ಸಾ1 ಮತ್ತು 2 ಸಿಬ್ಬಂದಿಯವರೊಂದಿಗೆ ಬೆಂಗಳೂರಿಗೆ ಹೋಗಿದ್ದೆನು. ದಿನಾಂಕ 29-12-2015 ರಂದು ಬೆಳಿಗ್ಗೆ 06-00 ಗಂಟೆಗೆ ಜೆ.ಪಿ. ನಗರದ ಡಾಲರ್ಸ್ ಕಲೋನಿಯಲ್ಲಿರುವ ಮನೆ ನಂಬರ್ 403 ನೇದ್ದಕ್ಕೆ ಹೋಗಿದ್ದೆನು. ಆ ಮನೆಯಲ್ಲಿ ಇದ್ದ ಜನರು ಬಾಗಿಲನ್ನು ತೆಗೆಯಲಿಲ್ಲ. ನಾನು ಆರೋಪಿಯನ್ನು ದೂರವಾಣಿಯ ಮೂಲಕ ಸಂಪರ್ಕಿಸಿದ್ದೆನು. ಆರೋಪಿ ತನ್ನ ಮಗನಾದ ಸೋಹೆಲ್ ಈತನಿಗೆ ಬಾಗಿಲು ತೆರೆಯುವಂತೆ ಹೇಳಿದ ನಂತರ ಬೆಳಿಗ್ಗೆ 10-00 ಗಂಟೆಗೆ ಸೋಹೆಲ್ ಈತನು ಮನೆಯ ಬಾಗಿಲನ್ನುತೆಗೆದಿದ್ದಾನೆ.

10. ನಾನು ಆ ಮನೆಯನ್ನು ಪಂಚರ ಸಮ್ಮುಖದಲ್ಲಿ ಬೆಳಿಗ್ಗೆ 10-00 ರಿಂದ ರಾತ್ರಿ 08-30 ಗಂಟೆಯವರೆಗೆ ಶೋಧನೆ ಮಾಡಿದ್ದೇನೆ. ಶೋಧನಾ ಕಾಲದಲ್ಲಿ ಸೋಹೆಲ್, ಆತನ ತಮ್ಮನಾದ

ತೋಪೆಲ್, ಆರೋಪಿಯ ಪತ್ನಿಯಾದ ಮುಬಾರಕ್ ಬೇಗಂ ಇದ್ದರು. ಶೋಧನೆಯನ್ನುಮಾಡಿದ ನಂತರ ನಾನು ನಿ.ಪಿ.19 ರಲ್ಲಿರುವ ಪಂಚನಾಮೆಯನ್ನು ತಯಾರಿಸಿದ್ದೇನೆ. ಅದರಲ್ಲಿ ನಿ.ಪಿ.19(ಸಿ) ದಲ್ಲಿ ತನ್ನ ಸಹಿ ಇದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ರುತಿಸಲಾಯಿತು.

11. ಆ ಮನೆಯ ಕಟ್ಟದಲ್ಲಿ ನೆಲ ಮಹಡಿ ಮತ್ತು ಎರಡು ಮಹಡಿಗಳು ಇದ್ದವು. ಆರೋಪಿಯ ಕುಟುಂಬ ನೆಲ ಮಹಡಿಯಲ್ಲಿ ವಾಸವಿದ್ದರು. ಆ ಮನೆಯ ನೆಲ ಮಹಡಿಯ ಮುಂಬಾಗದಲ್ಲಿ ಕಂಪೌಂಡ ಒಳಬಾಗದಲ್ಲಿ ಮೊಟಾರು ಸೈಕಲ ನಂಬರ ಕೆ.ಎ.05-ಹೆಚ್ ಜೆಡ್-2699 ಮತ್ತು ಕರಿಸ್ಮಾ ಮೊಟಾರು ಸೈಕಲ ನಂಬರ್ ಕೆ.ಎ.04-ಹೆಚ್ ಎ- 9404 ಇದ್ದವು. ನೆಲ ಮಹಡಿಯಲ್ಲಿ ಒಂದು ಕಾರ್ ಶೆಡ್ ಇತ್ತು. ಆ ಕಾರ್ ಶೆಡ್ಡಿನಲ್ಲಿ ಇನ್ನೋವಾ ಕಾರ ನಂಬರ್ ಕೆ.ಎ.05-ಎಮ್ ಎಸ್. 1594 ನಿಂತ್ತಿತ್ತು. ಮೊಟಾರು ಸೈಕಲ್ ನಂಬರ ಕೆ.ಎ.05 ಹೆಚ್. ಜೆಡ್ 2699 ಇದರ ಮೀಟರ್ ರೀಡಿಂಗ್ 10411 ಇತ್ತು. ಮೊಟಾರು ಸೈಕಲ್ ನಂಬರ ಕೆ.ಎ. 04-ಹೆಚ್ ಎ- 9404 ಇದರ ಮೀಟರ್ ರೀಡಿಂಗ್ 36559 ಇತ್ತು. ಕಾರ್ ನಂಬರ್ ಕೆ.ಎ.05-ಎಮ್ ಎಸ್. 1594 ಇದರ ಮೀಟರ್ ರೀಡಿಂಗ್ 1920 ಇತ್ತು.

12. ಆ ಮನೆಯನ್ನು ಶೋಧನೆ ಮಾಡಿದಾಗ, ಆರೋಪಿಯ ಹೆಂಡತಿಯ ಮೈಮೇಲೆ ಒಟ್ಟು ಆರು ಬಂಗಾರದ ಆಭರಣಗಳು ಇದ್ದವು. ಅಲಮೇರಾದಲ್ಲಿ ಮೂರು ಬಂಗಾರದ ಆಭರಣಗಳು ಇದ್ದವು. ಅವುಗಳ ಒಟ್ಟು ತೂಕ 157.150 ಗ್ರಾಂ. ಇತ್ತು. ನಾನು ಹೆಚ್. ಎಸ್. ಪ್ರಶಾಂತ ಎಂಬ ಅಕ್ಕಸಾಲಿಗನನ್ನು ಆ ಮನೆಗೆ ಕರೆಸಿದ್ದನು. ಆತ ಆಭರಣಗಳನ್ನು ತೂಕ ಮಾಡಿ, ತೂಕವನ್ನು ನನಗೆ ತಿಳಿಸಿದ್ದಾನೆ. ಆತ ಆ ಬಂಗಾರದ ಆಭರಣಗಳ ಮಾರುಕಟ್ಟೆಯ ಮೌಲ್ಯ 3,53,250/- ರೂಪಾಯಿ ಆಗುತ್ತದೆ ಎಂದು ತಿಳಿಸಿರುತ್ತಾನೆ.

13. ಅ ಮನೆಯಲ್ಲಿ ನಗದು 30,000/- ರೂಪಾಯಿ ಹಣ ಸಿಕ್ಕಿದೆ.

14. ಆ ಮನೆಯಲ್ಲಿ ಒಟ್ಟು 14 ದಾಖಲೆಗಳು ದೊರೆತಿವೆ. ಸಾಕ್ಷಿ ಆ ದಾಖಲೆಗಳು ನಿ.ಪಿ.2 ರಿಂದ 18 ರಲ್ಲಿವೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಈ ವಸ್ತುಗಳ ಮತ್ತು ದಾಖಲೆಗಳ ವಿವರಗಳನ್ನು ನಾನು ನಿ.ಪಿ.1 ರಲ್ಲಿ ಕಾಣಿಸಿರುತ್ತೇನೆ.

15. ನಾನು ಮೇಲೆ ಹೇಳಿದ ವಾಹನಗಳನ್ನು ಅಲ್ಲಿಯೇ ಬಿಟ್ಟಿದ್ದೇನೆ. ಬಂಗಾರದ ಆಭರಣಗಳನ್ನು ಆರೋಪಿಯ ಹೆಂಡತಿಗೆ ಮರಳಿ ನೀಡಿದ್ದೇನೆ. ನಗದು 30,000/- ಹಣವನ್ನು ಮತ್ತು ನಿ.ಪಿ.2 ರಿಂದ 18 ರಲ್ಲಿರುವ ದಾಖಲೆಗಳನ್ನು ವಶಕ್ಕೆ ಪಡೆದಿದ್ದೇನೆ.

16. ನಾನು ಪಂಚನಾಮೆಯ ಪ್ರತಿಯನ್ನು ಸೋಹೆಲ್ ಈತನಿಗೆ ನೀಡಿ ಆತನ ಸಹಿಯನ್ನು ಪಡೆದಿದ್ದೇನೆ.

17. ದಿನಾಂಕ 30-12-2015 ರಂದು ನನಗೆ ಚಾ.ಸಾ87 ಇವರು ತಾನು ಮಾಡಿದ ಮೂರು ಪಂಚನಾಮೆಗಳನ್ನು ಮತ್ತು ಶೋಧನಾ ವಾರೆಂಟನ್ನು ನೀಡಿರುತ್ತಾರೆ. ದಿನಾಂಕ 30-12-2015 ರಂದು ನನಗೆ ಚಾ.ಸಾ88 ಇವರು ತಾನು ಮಾಡಿದ ಪಂಚನಾಮೆಯನ್ನು ಮತ್ತು ಶೋಧನಾ ವಾರೆಂಟನ್ನು ನೀಡಿರುತ್ತಾರೆ. ದಿನಾಂಕ 30-12-2015 ರಂದು ನನಗೆ ಚಾ.ಸಾ89 ಇವರು ತಾನು ಮಾಡಿದ ಮೂರು ಪಂಚನಾಮೆಗಳನ್ನು ಮತ್ತು ಶೋಧನಾ ವಾರೆಂಟನ್ನು ನೀಡಿರುತ್ತಾರೆ.

18. ದಿನಾಂಕ 30-12-2015 ರಂದು ಚಾ.ಸಾ1 ರಿಂದ 6 ಇವರ ಹೇಳಿಕೆಗಳನ್ನು ಪಡೆದಿದ್ದೇನೆ.

19. ಐ.ಸಿ.ಐ.ಸಿ.ಐ. ಬ್ಯಾಂಕ್ ಬೆಂಗಳೂರು, ಕರ್ನಾಟಕ ಬ್ಯಾಂಕ್ ಬೆಂಗಳೂರು, ಕೋಟಕ್ ಮಹೀಂದ್ರ ಬ್ಯಾಂಕ್ ಬೆಂಗಳೂರು, ಹೆಚ್. ಡಿ. ಎಫ್. ಸಿ. ಬ್ಯಾಂಕ್ ಬೆಂಗಳೂರು, ಆಮಾನತ್ ಕೋ-ಆಪರೇಟಿವ್ ಬ್ಯಾಂಕ್ ಮೈಸೂರು, ಕಾರ್ಪೋರೇಷನ್ ಬ್ಯಾಂಕ್ ಗುಲ್ಬರ್ಗಾ, ಎಸ್.ಬಿ.ಐ. ಮಂಡ್ಯ, ಎಸ್. ಬಿ.ಎಮ್. ಕೊಳ್ಳೆಗಾಲ್, ಚಾಮರಾಜ ನಗರ, ಮೈಸೂರು, ಇವರಿಗೆ ಆರೋಪಿ ಮತ್ತು ಅವರ ಕುಟುಂಬದವರ ಹೆಸರಿನಲ್ಲಿರುವ ಖಾತೆಗಳ ವಿವರಗಳನ್ನು ನೀಡುವಂತೆ ಪತ್ರ ಬರೆದಿದ್ದೆನು.

20. ದಿನಾಂಕ 31-12-2015 ರಂದು ನಾನು ಪಂಚನಾಮೆಗಳನ್ನು ಮತ್ತು ವಾರೆಂಟುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ವಶಪಡಿಸಿಕೊಂಡ ವಸ್ತುಗಳ ವಿವರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ನಾನು ಚಾ.ಸಾ 7 ಮತ್ತು 8 ಇವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಅದೇ ರೀತಿ ಶೋಧನಾ ಕಾಲದಲ್ಲಿ ಸಹಕರಿಸಿದಂತಹ ಎಲ್ಲಾ ಸಿಬ್ಬಂದಿಗಳ ಹೇಳಿಕೆಗಳನ್ನು ಪಡೆದಿದ್ದೇನೆ.

21. ದಿನಾಂಕ 01-01-2016 ರಂದು ಆರೋಪಿಯ ಸೇವಾ ವಿವರವನ್ನು ಕೇಳಿದ್ದೇನೆ. ಆದಾಯ ತೆರಿಗೆ ಕಛೇರಿಗೆ ಬೇಕಾದ ವಿವರಗಳನ್ನು ನೀಡುವಂತೆ ಪತ್ರ ಸಲ್ಲಿಸಿದ್ದೇನೆ. ನಾನು ನಿ.ಪಿ. 29 ರಿಂದ 32 ರಲ್ಲಿರುವ ದಾಖಲೆಗಳನ್ನು ಸ್ವೀಕರಿಸಿದ್ದೇನೆ.

22. ನಾನು ಕರ್ನಾಟಕ ರೂರಲ್ ಡೆವೆಲಪಮೆಂಟ್ ಬ್ಯಾಂಕಿನಿಂದ ಈಗ ನೋಡುತ್ತಿರುವ ದಾಖಲೆಗಳನ್ನು ಪಡೆದಿದ್ದೇನೆ. ಆ ದಾಖಲೆಗಳನ್ನು ನಿ.ಪಿ.98 ಎಂದು ಗುರುತಿಸಲಾಯಿತು. ನಾನು

ಹೆಚ್. ಡಿ. ಎಫ್. ಸಿ. ಬ್ಯಾಂಕಿನಿಂದ ಈಗ ನೋಡುತ್ತಿರುವ ದಾಖಲೆಗಳನ್ನು ಪಡೆದಿದ್ದೇನೆ. ಆ ದಾಖಲೆಗಳನ್ನು ನಿ.ಪಿ.99 ಎಂದು ಗುರುತಿಸಲಾಯಿತು. ನಾನು ಅಮಾನತ್ ಕೋಆಪರೇಟಿವ್ ಬ್ಯಾಂಕಿನಿಂದ ಈಗ ನೋಡುತ್ತಿರುವ ದಾಖಲೆಗಳನ್ನು ಪಡೆದಿದ್ದೇನೆ. ಆ ದಾಖಲೆಗಳನ್ನು ನಿ.ಪಿ.100 ಎಂದು ಗುರುತಿಸಲಾಯಿತು.

23. ದಿನಾಂಕ 23-01-2016 ರಂದು ಆರೋಪಿ ಮತ್ತು ಆತನ ಕುಟುಂಬದ ಸದಸ್ಯರ ಹೆಸರಿನ ಮನೆಗಳ ಮೌಲ್ಯಮಾಪನ ಮಾಡುವಂತೆ ಮೇಲಾಧಿಕಾರಿಗಳ ಮೂಲಕ ಸಂಬಂಧಿಸಿದ ಇಲಾಖೆಗಳಿಗೆ ಪತ್ರ ನೀಡಿರುತ್ತೇನೆ.

24. ನಾನು ಆರೋಪಿ ಮತ್ತು ಆತನ ಕುಟುಂದ ಸದಸ್ಯರ ಎಲ್. ಐ. ಸಿ. ಪಾಲಿಸಿ ವಿವರಗಳನ್ನು ಸ್ವೀಕರಿಸಿರುತ್ತೇನೆ.

25. ನಾನು ಆರೋಪಿಯ ಮನೆಯಲ್ಲಿದ್ದ ಗೃಹ ಉಪಯೋಗಿ ವಸ್ತುಗಳ ಅಂದಾಜು ಮೌಲ್ಯವನ್ನು ಕಂಡುಕೊಂಡಿದ್ದೇನೆ. ಅವುಗಳ ಮೌಲ್ಯ 11,58,628/- ರೂಪಾಯಿಗಳ ಇರುತ್ತದೆ.

26. ದಿನಾಂಕ 27-01-2016 ರಂದು ನನಗೆ ಪೊಲೀಸ್ ವರಿಷ್ಠಾಧಿಕಾರಿಗಳು ತನಿಖೆಯನ್ನು ಚಾ.ಸಾ93 ಇವರಿಗೆ ವಹಿಸಿಕೊಡುವಂತೆ ಆದೇಶ ಮಾಡಿದ್ದರು. ಕಾರಣ ಅದೇ ದಿನ ನಾನು ತನಿಖೆಯನ್ನು ನಿ.ಪಿ.83 ಇವರಿಗೆ ವಹಿಸಿರುತ್ತೇನೆ.

(ಸಾಕ್ಷಿ ವಶಪಡಿಸಿಕೊಂಡಿದ್ದೇನೆ ಎಂದು ಹೇಳುವ ನಗದು 30,000/- ನ್ಯಾಯಾಲಯದ ವಶದಲ್ಲಿ ಇದೆ. ಅದು ಟ್ರೆಸರಿ ಬಾಕ್ಸಿನಲ್ಲಿ ಇರುತ್ತದೆ. ಕಾರಣ ಅದನ್ನು ಸಾಕ್ಷಿಗೆ ತೋರಿಸಿರುವುದಿಲ್ಲ. )

<u>ಪಾಟೀ ಸವಾಲು**:** ಆರೋಪಿ ಪರ ವಕೀಲರಿಂದ**:**</u>

(ಆರೋಪಿ ಪರ ವಕೀಲರು ಸಮಯ ಕೋರಿದ್ದಾರೆ. ಮುಂದಿನ ದಿನಾಂಕದಂದು ನಗದನ್ನು ಸಾಕ್ಷಿಗೆ ತೋರಿಸುವಂತೆ ನಿರ್ದೇಶನ ನೀಡಿ, ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು ಪೀಠ ಸಿಂಧನೂರು.

ಸಾಕ್ಷಿಯನ್ನು ಪುನ**:** ಕರೆಯಿಸಿ ದಿನಾಂಕ **24-07-2025** ರಂದು ಪ್ರಮಾಣ ವಚನ ಭೋಧಿಸಲಾಯಿತು**.**

( ಸಾಕ್ಷಿಗೆ ಈ ಕೇಸಿನಲ್ಲಿ ಮುದ್ದೆಮಾಲು 1 ರಲ್ಲಿರುವ 30,000/- ಹಣವನ್ನು ತೋರಿಸಿದಾಗ, ಸಾಕ್ಷಿ ಅವುಗಳನ್ನು ಗುರುತಿಸಿದ್ದಾರೆ. )

<u>ಪಾಟೀ ಸವಾಲು**:** ಆರೋಪಿ ಪರ ವಕೀಲರಿಂದ**:**</u>

26. ಲ್ಯಾಂಡ್ ಅರ್ಮಿ ಇದನ್ನು ಕೆ.ಆರ್. ಐ.ಡಿ. ಎಲ್. ಎಂದು ಮರು ನಾಮಕರಣ ಮಾಡಲಾಗಿತ್ತು ಅಂದರೆ ಸರಿ. ಅದು ಕಂಪನಿ ಕಾನೂನಿನ ಅಡಿಯಲ್ಲಿ ನೊಂದಣಿ ಆಗಿದೆ ಅಂದರೆ ಸರಿ. ಆ ಕಂಪನಿಯಲ್ಲಿ ಕಾರ್ಯ ನಿವರ್ಹಿಸುತ್ತಿರುವ ಉದ್ಯೋಗಿಗಳನ್ನು ಕಂಪನಿಯ ಎಮ್. ಡಿ. ನೇಮಕಾತಿ ಮಾಡುತ್ತಾರೆ ಅಂದರೆ ಸರಿ. ಅದೇ ರೀತಿ ಆ ಕಂಪನಿಯ ಎಮ್. ಡಿ. ಇವರು ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸುವ ಅಧಿಕಾರಿ ಹೊಂದಿದ್ದರು ಅಂದರೆ ಸರಿ.

27. ಆ ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಉದ್ಯೋಗಿಗಳಿಗೆ ಕಂಪನಿಯೇ ಸಂಬಳ ಮತ್ತು ಇತರ ಭತ್ತೆಗಳನ್ನು ನೀಡುತ್ತಿತ್ತು ಅಂದರೆ ಸರಿ. ಸಾಕ್ಷಿ ಮುಂದುವರೆದು ಆ ಕಂಪನಿಗೆ ರಾಜ್ಯ ಸರಕಾರದಿಂದ ಅನುಧಾನ ಬರುತ್ತಿತ್ತು ಮತ್ತು ಆ ಅನುಧಾನದಿಂದ ಕಂಪನಿಯ ಉದ್ಯೋಗಿಗಳಿಗೆ ಸಂಬಳ ಮತ್ತು ಭತ್ತೆ ನೀಡಲಾಗುತ್ತಿತ್ತು ಎಂದು ಹೇಳಿರುತ್ತಾರೆ. ಸರಕಾರದಿಂದ ಅನುಧಾನ ಬರುತ್ತಿತ್ತು ಮತ್ತು ಆ ಅನುಧಾನವನ್ನು ಉದ್ಯೋಗಿಗಳಿಗೆ ಸಂಬಳ ಮತ್ತು ಭತ್ತೆ ನೀಡಲು ಉಪಯೋಗಿಸಲಾಗುತ್ತಿತ್ತು ಅಂದರೆ ಸರಿಯಲ್ಲ. ಸರಕಾರದಿಂದ ಕಂಪನಿಗೆಯಾವುದೇ ಅನುಧಾನವಾಗಲಿ, ಅಥವಾ ಹಣವಾಗಲಿ ಬರುತ್ತಿರಲಿಲ್ಲ ಅಂದರೆ ಸರಿಯಲ್ಲ. ಆ ಕಂಪನಿಯಲ್ಲಿ ಸರಕಾರದ ಶೇರು ಇರಲಿಲ್ಲ ಅಂದರೆ ಸರಿಯಲ್ಲ.

28. ಮೇಲೆ ಹೇಳಿದ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಉದ್ಯೋಗಿಗಳಿಗೆ ಆ ಕಂಪನಿಯ 'ಸಿ' ಮತ್ತು 'ಆರ್' ನಿಯಮಗಳು ಅನ್ವಯ ಆಗುತ್ತಿದ್ದವು ಅಂದರೆ ಸರಿ. ಆ ಉದ್ಯೋಗಿಗಳಿಗೆ ಕೆ.ಸಿ. ಎಸ್. ಆರ್. ಅನ್ವಯ ಆಗುತ್ತಿರಲಿಲ್ಲ ಅಂದರೆ ಸರಿ.

29. ಕಂಪನಿ ಸರಕಾರದ ಮತ್ತು ಖಾಸಗಿ ವ್ಯಕ್ತಿಗಳ ಅಥವಾ ಸಂಸ್ಥೆಗಳ ಕಟ್ಟಡ ಕೆಲಸಗಳನ್ನು ವೆಚ್ಚದ ಮೇಲೆ ಸುಮಾರು ಪ್ರತಿಶತ 5 ರಿಂದ 10 ಮೊತ್ತವನ್ನು ಸುಪರ್ ವೈಸರ್ ರೂಪದಲ್ಲಿ ಪಡೆದು ಕಟ್ಟಡದ ಕೆಲಸ ಮಾಡುತ್ತಿತ್ತು ಅಂದರೆ ಸರಿ.

30. ಆರೋಪಿ ಪಿ.ಸಿ. ಕಾನೂನಿನ ಅಡಿಯಲ್ಲಿ ಸಾರ್ವಜನಿಕ ಅಧಿಕಾರಿ ಆಗಿರಲಿಲ್ಲ ಅಂದರೆ

ಸರಿಯಲ್ಲ.

31. ನಿ.ಪಿ.1, 90, 91 ಮತ್ತು 92 ರಲ್ಲಿರುವ ಶೋದನಾ ವಾರೆಂಟುಗಳಲ್ಲಿ ನ್ಯಾಯಾಲಯ ಆಯಾ ಸ್ಥಳಗಳಲ್ಲಿ ಬಂಗಾರ, ಬೆಳ್ಳಿ, ಹಣ ಮತ್ತು ದಾಖಲೆಗಳನ್ನು ಶೋಧನೆ ಮಾಡಲು ಮಾತ್ರ ವಾರೆಂಟನ್ನು ನೀಡಿತ್ತು ಅಂದರೆ ಸರಿ.

32. ಆ ವಾರೆಂಟುಗಳ ಪ್ರಕಾರ ನನಗಾಗಲಿ ಮತ್ತು ವಾರೆಂಟುಗಳಲ್ಲಿ ತೋರಿಸಿದಂತಹ ಅಧಿಕಾರಿಗೆ ಆಯಾ ಸ್ಥಳಗಳಲ್ಲಿ ಇದ್ದ ಗೃಹ ಉಪಯೋಗಿ ವಸ್ತುಗಳನ್ನು, ವಾಹನಗಳನ್ನು ಮತ್ತು ಇತರ ವಸ್ತುಗಳನ್ನು ಶೋಧನೆ ಮಾಡುವಂತಹ ಅಧಿಕಾರಿ ಇರಲಿಲ್ಲ ಅಂದರೆ ಸರಿಯಲ್ಲ. ವಾರೆಂಟುಗಳಲ್ಲಿ ಕಾಣಿಸಿದಂತಹ ಬೆಲೆ ಬಾಳುವ ವಸ್ತು ಮತ್ತು ದಾಖಲೆಗಳನ್ನು ಹೊರೆತು ಪಡಿಸಿ, ಇತರ ವಸ್ತುಗಳನ್ನು ಶೋಧನೆ ಮಾಡುವಂತಹ ಅಧಿಕಾರ ನನಗೆ ಮತ್ತು ಇತರ ಅಧಿಕಾರಿಗಳಿಗೆ ಇರಲಿಲ್ಲ ಅಂದರೆ ಸರಿಯಲ್ಲ.

33. ನಿ.ಪಿ. 18 ರಲ್ಲಿ ಕಾಣಿಸಿದ ಪಾಲಿಸಿಯ ಕಂತು ಆರೋಪಿಯ ಪ್ರತಿ ತಿಂಗಳ ಸಂಬಳದಲ್ಲಿ ಕಾಟವು ಆಗುತ್ತಿತ್ತು ಅಂದರೆ ಸರಿ.

34. ಆರೋಪಿಯ ಮನೆಯಲ್ಲಿ ಸಿಕ್ಕ ಬಂಗಾರದ ಆಭರಣಗಳ ತೂಕವನ್ನು ಮತ್ತು ಮೌಲ್ಯವನ್ನು ಪ್ರತ್ಯೇಕ ಯಾದಿಯಲ್ಲಿ ಬರೆದು ಅಕ್ಕಸಾಲಿಗನ, ಪಂಚರ ಮತ್ತು ನನ್ನ ಸಹಿಗಳನ್ನು ಅದರಲ್ಲಿ ಪಡೆದಿಲ್ಲ.

35. ಆರೋಪಿಯ ಹೆಂಡತಿಗೆ ಮದುವೆ ಕಾಲದಲ್ಲಿ ಮತ್ತು ಅವರ ಮೊಮ್ಮಕ್ಕಳ ಜನ್ಮ ದಿನಾಂಕದ ಸಮಾರಂಭದಲ್ಲಿ ಬಂಗಾರದ ಒಡವೆಗಳು ಬಂದಿದ್ದವು ಮತ್ತು ಆ ಒಡವೆಗಳು ಮನೆಯುಲ್ಲಿ ಸಿಕ್ಕಿದ್ದರಿಂದ ನಾನು ಅವು ಉಡಗೊರೆ ಎಂದು ಅವುಗಳನ್ನು ಆರೋಪಿಯ ಹೆಂಡತಿಗೆ ಮರಳಿಸಿದ್ದೇನೆ ಅಂದರೆ ಸರಿಯಲ್ಲ.

36. ನಾನು ಮುದ್ದೆಮಾಲು 1 ರಲ್ಲಿರುವ ನಗದಿನ ನಂಬರುಗಳನ್ನು ಪಂಚನಾಮೆಯಲ್ಲಿ ಅಥವಾ ಪ್ರತ್ಯೇಕ ಯಾದಿಯಲ್ಲಿ ಬರೆದಿರುವುದಿಲ್ಲ. ಮುದ್ದೆಮಾಲು 1 ರಲ್ಲಿರುವ ನೋಟುಗಳ ಮೇಲೆ ಇರುವ ಅವುಗಳನ್ನು ಮುದ್ರಿಸಿದಂತಹ ವರ್ಷ 2019 ಎಂದು ಕಾಣಿಸಲಾಗಿದೆ ಅಂದರೆ ಸರಿ. ಪಂಚನಾಮೆ ಮಾಡುವಾಗ ಮುದ್ದೆಮಾಲು 1 ರಲ್ಲಿರುವ 30,000/- ನಗದನ್ನು ಆರೋಪಿಯ ಮನೆಯಿಂದ ಜಪ್ತಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

37. ನಾನು ಕೇಳಿದ ದಾಖಲೆಗಳಲ್ಲಿ ಬ್ಯಾಂಕಿನಿಂದ ಯಾವುದೇ ದಾಖಲೆಗಳು ತನಿಖಾ ಕಾಲದಲ್ಲಿ ಬಂದಿರಲಿಲ್ಲ.

**Spl. C. 5243/2024**
ಚಾ.ಸಾ **:86** ಪ್ರಾ.ಸಾ **:15**

38. ನಿ.ಪಿ.99 ರಲ್ಲಿರುವ ಬ್ಯಾಂಕಿನ ಖಾತೆ ಆರೋಪಿಯ ಹೆಂಡತಿಯ ಹೆಸರಿನಲ್ಲಿದ್ದು, ಅವಳು ಆ ಖಾತೆಯಿಂದ ಸಾಲದ ರೂಪದಲ್ಲಿ ಮನೆ ಕಟ್ಟಲು ಹಣ ಪಡೆದಿದ್ದಾಳೆ ಅಂದರೆ ಸರಿ. ನಿ.ಪಿ. 98 ರಲ್ಲಿ ಬ್ಯಾಂಕಿನ ದಾಖಲೆಗಳು ಇಲ್ಲ ಮತ್ತು ಅವುಗಳಲ್ಲಿ ಆರೋಪಿಯ ಸೇವಾ ವಿವರ ಇವೆ ಅಂದರೆ ಸರಿ.

39. ದಿನಾಂಕ 08-11-2016 ರಂದು 1000 ಮತ್ತು 500 ಮುಖ ಬೆಲೆಯುಳ್ಳ ನೋಟುಗಳನ್ನು ಅಮಾನ್ಯಗೊಳಿಸಲಾಗಿತ್ತು ಅಂದರೆ ಸರಿ. ನಾನು ಆರೋಪಿ ಮತ್ತು ಆತನ ಕುಟುಬಂದ ಸದಸ್ಯರ ಎಲ್. ಐ. ಸಿ. ಪಾಲಿಸಿಗಳ ವಿವರಗಳನ್ನು ಸ್ವೀಕರಿಸಿಲ್ಲ ಅಂದರೆ ಸರಿಯಲ್ಲ.

40. ನಾನು ಆರೋಪಿಯ ಮನೆಯಲ್ಲಿ ಸಿಕ್ಕಂತಹ ಗೃಹ ಉಪಯೋಗಿ ವಸ್ತುಗಳ ನಿಖರವಾದ ಮೌಲ್ಯವನ್ನು ಕಂಡು ಕೊಂಡಿಲ್ಲ. ಅವುಗಳ ಅಂದಾಜು ಮೌಲ್ಯ 11,58,628/- ಆಗುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

41. ಆರೋಪಿ ಸರಕಾರಿ ನೌಕರನು ಇರದೆ ಇದ್ದರೂ ಸಹ ನಾನು ಆತನ ವಿರುದ್ದ ಪ್ರಕರಣವನ್ನು ಕಾನೂನಿಗೆ ವಿರುದ್ದವಾಗಿ ದಾಖಲಿಸಿದ್ದೇನೆ ಅಂದರೆ ಸರಿಯಲ್ಲ. ನಾನು ಮಾಡಿದ ತನಿಖೆ ಕಾನೂನು ಬಹೀರ ಆಗಿದೆ ಅಂದರೆ ಸರಿಯಲ್ಲ.

42. ಸರಕಾರದಿಂದ ಬಂದ ಅನುಧಾನ ಅಥವಾ ಇತರ ಹಣವನ್ನು ಕಂಪನಿಯ ಉದ್ಯೋಗಿಗಳಿಗೆ ಸಂಬಳ ಮತ್ತು ಭತ್ತೆ ರೂಪದಲ್ಲಿ ನೀಡಲಾಗಿದೆ ಎಂಬ ಕುರಿತು ನಾನು ದಾಖಲೆಗಳನ್ನು ಪಡೆದುಕೊಂಡಿಲ್ಲ. ನಾನು ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು ಪೀಠ ಸಿಂಧನೂರು.